

ತಮ್ಮ ಬಡತನ ನೀಗಿಹೋಯಿತು ಎಂಬ ಸಂಭ್ರಮ ಅವರಿಗಾಯಿತು.

ಮತ್ತೆ ಅದೇ ದೋಣಿಯೇರಿ ಅವರು ಆ ನಿಧಿಯಿದ್ದ ಮೂಟೆಗಳನ್ನು ತುಂಬಿಕೊಂಡು ಹೊರಟರು. ನದಿಯ ಮಧ್ಯಭಾಗಕ್ಕೆ ಬರುತ್ತಿದ್ದಂತೆ ನೀರಿನ ಸೆಳೆತ ಜೋರಾಯಿತು. ಭಾರ ಹೆಚ್ಚಾಗಿ ದೋಣಿ ಮುಳುಗಲಾರಂಭಿಸಿತು. ಇಬ್ಬರೂ ಹೆದರಿದರು. ಅಲ್ಲದೆ, ದೋಣಿಯವನು ಮೊದಲೇ ಎಚ್ಚರಿಸಿದ್ದ ತುಂಬಾ ಭಾರ ಹಾಕಬೇಡಿ ಎಂದು. 'ಈಗ ಏನು ಮಾಡುವುದು?' ಎಂದ ರಾಮಾಚಾರಿ.

'ನಾವು ಭಾರ ಕಡಿಮೆ ಮಾಡದಿದ್ದರೆ ನದಿಯೊಳಗೆ ಮುಳುಗಿ ಸಾಯುತ್ತೇವೆ. ಇದೊಂದೇ ದಾರಿ' ಎಂದು ಸೀತಾಪತಿ ಹೇಳಿದ. ಇಬ್ಬರಿಗೂ ಪ್ರಾಣಭಯದ ಜೊತೆಗೆ ಪಡೆದಿದ್ದನ್ನೆಲ್ಲಾ ಕಳೆದುಕೊಳ್ಳಬೇಕಾಗುತ್ತದಲ್ಲ ಎನ್ನುವ ಬೇಸರವೂ ಸೇರಿತು.

ಕೊನೆಗೂ ಮನಸ್ಸಿಲ್ಲದ ಮನಸ್ಸಿನಿಂದ ನಿಧಿಯಿದ್ದ ಒಂದು ಚೀಲವನ್ನು ಎತ್ತಿ ನೀರಿಗೆ ಹಾಕಿದರು. ಆದರೂ ದೋಣಿ ಹೊಯ್ದಾಡಿತು. ಇನ್ನೊಂದು ಚೀಲ ಎಸೆದರು... ಮತ್ತೊಂದು ಚೀಲ ಎಸೆದರು... ಹೀಗೆ ಅವರು ದೋಣಿ ಸಮಸ್ಥಿತಿಗೆ ಬರಲು ಒಂದಾದಮೇಲೆ ಒಂದರಂತೆ ಏಳು ಚೀಲಗಳನ್ನು ನದಿಗೆ ಎಸೆಯಬೇಕಾಯಿತು. ಕೊನೆಯದಾಗಿ ಇನ್ನೊಂದು ಚೀಲವಿತ್ತು. ಅದನ್ನು ಉಳಿಸಿಕೊಂಡು ಪ್ರಾಣಕಳೆದುಕೊಳ್ಳುವುದೆ ಅಥವಾ ಅದನ್ನೂ ಎಸೆದು ಪ್ರಾಣ ಉಳಿಸಿಕೊಳ್ಳುವುದೆ ಎನ್ನುವಂತಾಯಿತು. ಅತೀವ ಬೇಸರ, ಸಂಕಟ ಹಾಗೂ ನಿರಾಸೆಯಿಂದ ಅವರು ಕೊನೆಯ ಚೀಲವನ್ನು ಸಹ ನೀರಿನಲ್ಲಿ ಎಸೆದರು. ಹೇಗೋ ದೋಣಿಯನ್ನು ದಡಕ್ಕೆ ತಂದು, ಪ್ರಾಣ ಉಳಿಸಿಕೊಂಡರು.

ಇಳಿಯುವಾಗ ದೋಣಿಯೊಳಗೆ ಎರಡೇ ಎರಡು ಚಿನ್ನದ ನಾಣ್ಯಗಳು ಬಿದ್ದಿದ್ದವು. ಅದನ್ನು ನೋಡಿ ಸೀತಾಪತಿ ಹೇಳಿದ, 'ನಮ್ಮಪ್ಪ ಹೇಳಿದ್ದ. ಯೋಗ ಇದ್ದಷ್ಟೇ ಭೋಗ. ನಾವೇನೇ ಮಾಡಿದರೂ ಅದಕ್ಕಿಂತ ಹೆಚ್ಚಿನದು ನಮಗೆ ದಕ್ಕುವುದಿಲ್ಲ. ರಾಶಿ ರಾಶಿ ಹೊತ್ತು ತಂದರೂ ದಕ್ಕಿದ್ದು ಮಾತ್ರ ಒಂದೇ ನಾಣ್ಯ...' ಎಂದ. 'ಹೌದು, ದೇವರು ನಮಗೆ ಎಷ್ಟು ಕೊಟ್ಟು ಕಳಿಸಿರುತ್ತಾನೊ ಅಷ್ಟೆ ನಮಗೆ ಉಳಿಯುತ್ತದೆ' ಎಂದ ರಾಮಾಚಾರಿ. ●